ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 05-07-2018

ಪ್ರಕಟಣೆಯ ಕೃಪೆಗಾಗಿ

# ಕಲಿಕೆ ಎಂಬುದು ನಿರಂತರ ಪ್ರಕ್ರಿಯೆ

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಅಭಿವಿನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಹೆಚ್ ಜಿ ನಟರಾಜನ್

ಕೊಳ್ಳೇಗಾಲ : 5-7-18 : ಕಲಿಕೆ ಎಂಬುದು ನಿರಂತರ ಪ್ರಕ್ರಿಯೆಯಾಗಿದೆ. ಅದು ನಿಂತ ನೀರಲ್ಲ, ಕಾಲೇಜು ಜೀವನ ವಿದ್ಯಾರ್ಥಿಗಳು ತಮ್ಮ ಉಜ್ವಲ ಭವಿಷ್ಯ ರೂಪಿಸಿಕೊಳ್ಳುವ ಸಮುಯ ಎಂದು ಇತಿಹಾಸ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಹೆಚ್ ಜಿ ನಟರಾಜನ್‌ರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪ್ರಥಮ ಪದವಿ ವಿದ್ಯಾರ್ಥಿನಿಯರಿಗಾಗಿ ಆಯೋಜಿಸಿದ್ದ ಅಭಿವಿನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಭತ್ತ ತುಂಬುವ ಚೀಲಗಳಾಗದೆ ಭತ್ತ ಬೆಳೆಯುವ ಗದ್ದೆಗಳಂತಾಗಬೇಕು. ಕಾಲೇಜಿನಲ್ಲಿಯಷ್ಟೇ ಅಲ್ಲದೆ ಜೀವನ ಪರ್ಯಂತ ಕಲಿಕೆ ಮುಂದುವರಿಯುತ್ತದೆ. ಕಲಿಕೆಯ ಬುನಾದಿ ಶಾಲಾ ಕಾಲೇಜುಗಳಲ್ಲಿನ ಸಮಯ. ಇಲ್ಲಿ ಗಳಿಸುವ ಪದವಿ ಶಿಕ್ಷಣದ ಜೊತೆಗೆ ಜೀವನದ ಶಿಕ್ಷಣವನ್ನು ಕಲಿಯುವುದರಲ್ಲಿಯೂ ತೇರ್ಗಡೆ ಹೊಂದಿದಾಗ ಉತ್ತಮ ಜೀವನ ಹೊಂದಲು ಸಾಧ್ಯ. ಎರಡೂ ರೀತಿಯ ಶಿಕ್ಷಣ ನೀಡಿರುವುದರಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಿಗಿರುವ ಕಾಳಜಿ ಮೆಚ್ಚುವಂಥದ್ದು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಶಿಕ್ಷಣವನ್ನು ನಾವು ನೋಡುವ ದೃಷ್ಠಿಕೋನದಲ್ಲಿ ತಪ್ಪಿದೆ. ಉದ್ಯೋಗಕ್ಕಾಗಿ, ಹಣ ಮತ್ತು ಶ್ರೀಮಂತಿಕೆ ಗಳಿಸುವುದೇ ಕಲಿಕೆಯ ಪರಮ ಗುರಿ ಎಂದು ಭಾವಿಸುವುದು ಸರಿಯಲ್ಲ. ನಮ್ಮ ಸಮಾಜವನ್ನು ಸಾಂಸ್ಕೃತಿಕ ಹಾಗೂ ಮಾನವೀಯ ನೆಲೆಯಲ್ಲಿ ಶ್ರೀಮಂತಗೊಳಿಸುವ ಶಿಕ್ಷಣವೇ ನಿಜವಾದ ಶಿಕ್ಷಣ. ಸಮಾಜ ಬದಲಾಗುವುದರಲ್ಲಿ ಶಿಕ್ಷಣದ ಪಾತ್ರ ಹಿರಿದು. ಇಂತಹ ಮೌಲ್ಯಗಳನ್ನು ತಿಳಿಸಿ ಬೆಳೆಸಬೇಕೆಂಬ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಇವುಗಳ ಸದುಪಯೋಗವಾದರೆ ಸಮಾರಂಭಗಳು ಸಾರ್ಥಕತೆ ಪಡೆಯುತ್ತವೆ ಎಂದು ತಿಳಿಸಿದರು.

ಪ್ರೊ. ಎ ಪಿ ಮಹದೇವಪ್ಪನವರು ಮಾತನಾಡಿದರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ ಎಂ ಬಸವರಾಜು, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಕೆ ಆರ್ ಗುರುಪ್ರಸಾದ್, ನಿರ್ವಹಣಾಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಸ್ ಮಮತ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎ ಎಸ್ ಸ್ಮಿತಾರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಲೇಜಿನಲ್ಲಿನ ಸೌಲಭ್ಯಗಳು, ಮೂಲೋದ್ದೇಶಗಳು, ಪ್ರಸ್ತುತ ಹಾಗೂ ಮುಂಬರುವ ವರ್ಷಗಳಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳನ್ನು ವಿದ್ಯಾರ್ಥಿಗಳಿಗೆ ಪಿ.ಪಿ.ಟಿ ಮುಖೇನ ಪರಿಚಯಿಸಲಾಯಿತು.

ಪ್ರಥಮ ಪದವಿ ವಿದ್ಯಾರ್ಥಿನಿಯರಿಗಾಗಿ ಅಭಿವಿನ್ಯಾಸ ಕಾರ್ಯಕ್ರಮ. ಚಿತ್ರದಲ್ಲಿ ಶ್ರೀಮತಿ ಎಸ್ ಮಮತ, ಶ್ರೀ ಕೆ ಆರ್ ಗುರುಪ್ರಸಾದ್, ಶ್ರೀ ಎ ಪಿ ಮಹದೇವಪ್ಪ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಹೆಚ್ ಜಿ ನಟರಾಜನ್, ಪ್ರೊ. ಎಂ ಬಸವರಾಜು, ಶ್ರೀಮತಿ ಎ ಎಸ್ ಸ್ಮಿತಾ ಹಾಗೂ ಶೀಮತಿ ಕೆ ಆರ್ ಉಮಾದೇವಿ ರವರನ್ನು ಕಾಣಬಹುದು.




ಪ್ರಥಮ ಪದವಿ ವಿದ್ಯಾರ್ಥಿನಿಯರಿಗಾಗಿ ಆಯೋಜಿಸಿದ್ದ ಅಭಿವಿನ್ಯಾಸ ಕಾರ್ಯಕ್ರಮವನ್ನು ಇತಿಹಾಸ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಹೆಚ್ ಜಿ ನಟರಾಜನ್‌ರವರು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀ ಎ ಪಿ ಮಹದೇವಪ್ಪ, ಶ್ರೀಮತಿ ಎಸ್ ಮಮತ, ಶ್ರೀ ಕೆ ಆರ್ ಗುರುಪ್ರಸಾದ್, ಪ್ರಾಚಾರ್ಯ ಪ್ರೊ. ಉಮೇಶ, ಶೀಮತಿ ಕೆ ಆರ್ ಉಮಾದೇವಿ ಪ್ರೊ. ಎಂ ಬಸವರಾಜು ಹಾಗೂ ಶ್ರೀಮತಿ ಎ ಎಸ್ ಸ್ಮಿತಾ ರವರನ್ನು ಕಾಣಬಹುದು.



ಪ್ರಥಮ ಪದವಿ ವಿದ್ಯಾರ್ಥಿನಿಯರಿಗಾಗಿ ಆಯೋಜಿಸಿದ್ದ ಅಭಿವಿನ್ಯಾಸ ಕಾರ್ಯಕ್ರಮವನ್ನು ಇತಿಹಾಸ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಹೆಚ್ ಜಿ ನಟರಾಜನ್‌ರವರು ಉದ್ಘಾಟನಾ ಬಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಎಸ್ ಮಮತ, ಶ್ರೀ ಕೆ ಆರ್ ಗುರುಪ್ರಸಾದ್, ಶ್ರೀ ಎ ಪಿ ಮಹದೇವಪ್ಪ, ಪ್ರಾಚಾರ್ಯ ಪ್ರೊ. ಉಮೇಶ, ಪ್ರೊ. ಎಂ ಬಸವರಾಜು, ಶ್ರೀಮತಿ ಎ ಎಸ್ ಸ್ಮಿತಾ ಹಾಗೂ  ಶೀಮತಿ ಕೆ ಆರ್ ಉಮಾದೇವಿ ರವರನ್ನು ಕಾಣಬಹುದು.




ಪ್ರಸ್ತುತ ಹಾಗೂ ಮುಂಬರುವ ವರ್ಷಗಳಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳನ್ನು ವಿದ್ಯಾರ್ಥಿಗಳಿಗೆ ಪಿ.ಪಿ.ಟಿ ಮುಖೇನ ಪರಿಚಯಿಸುತ್ತಿರುವುದು.

